- -

ಅಸಲು ದಾವಾ ನಂ:256/2018
ಡಿ.ಡಬ್ಲ್ಯೂ: 03

<u>ದಿನಾಂಕ:01-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಶ್ರೀ ಕೆ ಎಂ ಎನ್., ವಾದಿ ಪರ ವಕೀಲರಿಂದ</u>

ಈ ದಾವಾದಲ್ಲಿ ನಾನು 10ನೇ ಪ್ರತಿವಾದಿ ಎಂದರೆ ಸರಿ. ಡಿ.ಡಬ್ಲ್ಯೂ-1 ರವರು 9ನೇ ಪ್ರತಿವಾದಿ ಎಂದರೆ ಸರಿ. ನಾನು ಮತ್ತು 9ನೇ ಪ್ರತಿವಾದಿ ಒಂದೇ ತಕರಾರನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ನನ್ನ ಮತ್ತು 9ನೇ ಪ್ರತಿವಾದಿಯ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಅಂಶಗಳು ಒಂದೇ ಎಂದರೆ ಸರಿ. ನಾನು ಮತ್ತು 9ನೇ ಪ್ರತಿವಾದಿ ಪಕ್ಷಗಾರರಾಗಿರುವುದರಿಂದ ಈ ಕೇಸಿನ ಎಲ್ಲಾ ಸಾಕ್ಷ್ಯವನ್ನು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. 9ನೇ ಪ್ರತಿವಾದಿಯವರು ನುಡಿದ ಸಾಕ್ಷಿಗೆ ನನ್ನದು ಯಾವುದೇ ವ್ಯತಿರಿಕ್ತವಾದ ಸಾಕ್ಷ್ಯ ಇರುವುದಿಲ್ಲ. 9ನೇ ಪ್ರತಿವಾದಿಯವರು ತಮ್ಮ ಪಾಟೀ ಸವಾಲಿನಲ್ಲಿ ನುಡಿದ ಸಾಕ್ಷ್ಯವನ್ನು ನಾನು ಒಪ್ಪುತ್ತೇನೆ. ನನ್ನ ಮತ್ತು 9ನೇ ಪ್ರತಿವಾದಿಯರವರು ಸಲ್ಲಿಸಿರುವ ತಕರಾರಿನಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ವ್ಯತಿರಿಕ್ತ ಹಿತಾಸಕ್ತಿ ಇಲ್ಲ ಎಂದರೆ ಸರಿ. 9ನೇ ಪ್ರತಿವಾದಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಅದೇ ರೀತಿ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರವು ಸುಳ್ಳು ಅಂಶಗಳಿಂದ ಕೂಡಿವೆ ಎಂದರೆ ಸರಿಯಲ್ಲ.

2. ವಾದಿ ಸಂಸ್ಥೆಯ ಮುಖ್ಯ ಕಚೇರಿಯ ಅನುಮತಿಯನ್ನು ಪಡೆಯದೇ ಅನಧೀಕೃತವಾಗಿ ಶಾಖೆಯನ್ನು ತೆರೆದು ಚಟುವಟಿಕೆಗಳನ್ನು ನಡೆಸಿದ್ದೀರಿ ಸದರಿ ಕಾರಣದಿಂದ ವಾದಿಯ ಸಂಸ್ಥೆ ಈ ದಾವೆಯನ್ನು ಹೂಡಿದ್ದಾರೆ ಈ ವಿಚಾರಗಳು ತಿಳಿದಿದ್ದರು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.